ಹೋಗಿರಬಹುದು. ನಿಮ್ಮ ಮಾತುಕತೆ ಹಾಗೂ ಸ್ವಭಾವವನ್ನು ನೋಡಿದಾಗ ನೀವು ಬಹಳ ಪ್ರೀತಿ ವಿಶ್ವಾಸದಿಂದ ನಡೆದುಕೊಂಡಿದ್ದೀರಿ ಎನ್ನುವ ಮಾತನ್ನು ಮತ್ತೊಮ್ಮೆ ಹೇಳುತ್ತೇನೆ, ನಿಮಗೆ ದೇವರು ಒಳ್ಳೆಯದು ಮಾಡಲಿ, ನಮ್ಮ ಜೊತೆಯಲ್ಲಿ ನೀವು ಪ್ರೀತಿಯಿಂದ ಇದ್ದೀರಿ, ನಾವಂತು ಇರುತ್ತೇವೆ ಬಿಡಿ. ನಾನಂತು ನಿಮ್ಮ ಜೊತೆಯಲ್ಲಿ, ನೀವು ಯಾವ ಪಕ್ಷದಲ್ಲಿ ಇರಲಿ, ಎಲ್ಲೇ ಇರಲಿ ನಿಮ್ಮ ಜೊತೆಯಲ್ಲಿ ಇರುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿ ಇಷ್ಟು ಸುಲಲಿತವಾಗಿ ಈ ಸದನವನ್ನು ಬಹಳ ಹೆಚ್ಚಿನ ರೀತಿಯಲ್ಲಿ ನಡೆಸಿಕೊಂಡು ಬಂದಿದ್ದೀರಿ. ತಾವು ಆ ಪೀಠದಲ್ಲಿ ಕುಳಿತುಕೊಂಡು ನಂತರ, ಜನತಾದಳದವರಿಗೆ ಅನೇಕ ತಲೆ ನೋವುಗಳು, ಅನೇಕ ಸಂದರ್ಭಗಳು ಅನೇಕ ಎಡರು-ತೊಡರುಗಳೆಲ್ಲ ಮಾಯವಾದವು. ಅದಕ್ಕಾಗಿಯೇ ನಿಮ್ಮನ್ನು ತಂಯ ಇಲ್ಲಿ ಕೂಡಿಸಿದರು ಎಂದು ನಾನು ಹೇಳಿದೆ. ತಮಗೆ ಜ್ಞಾಪಕ ಇರಬಹುದು, ನಾನು ಪ್ರಾರಂಭದಲ್ಲಿಯೇ ಹೇಳಿದೆ. ಮೊದಲು ತಾವು ಅಧ್ಯಕ್ಷರಾದಾಗ ಈ ಮಾತನ್ನು ನಾನು ಹೇಳಿದೆ. ನಿಮ್ಮನ್ನು ಅಲ್ಲಿ ಏಕೆ ತಂದು ಕೂಡಿಸಿದರು ಎನ್ನುವುದನ್ನು ಹೇಳಿದ್ದೇನೆ. ತಮಗೆ ಶ್ರೇಯಸ್ಸು ಕೊಡಲಿ, ದೇವರು ಒಳ್ಳೆಯದನ್ನು ಮಾಡಲಿ ನಿಮಗೆ ಆಯುರಾರೋಗ್ಯ ಕೊಡಲಿ ಎನ್ನತಕ್ಕಂಥ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

10 ಪ್ರಕಟಣೆ

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ದಿನಾಂಕ 3ನೇ ಏಪ್ರಿಲ್ 1999ರಂದು ವಿಧಾನ ಪರಿಷತ್ತು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಯಿಲ್ಲದೆ ಅಂಗೀಕರಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

1) ಕರ್ನಾಟಕ ಸ್ಟ್ಯಾಂಪು (ತಿದ್ದುಪಡಿ) ವಿಧೇಯಕ, 1999.
2) ಕರ್ನಾಟಕ ಸಂಸದೀಯ ಕಾರ್ಯದರ್ಶಿಗಳ ಭತ್ಯೆಗಳ (ತಿದ್ದುಪಡಿ) ವಿಧೇಯಕ, 1999.
3) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 1999.
4) ಕರ್ನಾಟಕ ಸಂಘಗಳ ನೋಂದಣಿ (ತಿದ್ದುಪಡಿ) ವಿಧೇಯಕ, 1997.

11. ಸದನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಅಧ್ಯಕ್ಷರು : ಹತ್ತನೇ ವಿಧಾನ ಸಭೆಯ ಎಂಟನೇ ಅಧಿವೇಶನದ ದಿನಾಂಕ 8ನೇ ಮಾರ್ಚ್ 1999 ರಿಂದ 3ನೇ ಏಪ್ರಿಲ್ 1999ರವರೆಗೆ ನಡೆಸಿದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಸೋಮವಾರ, ದಿನಾಂಕ 8ನೇ ಮಾರ್ಚ್ 1999ರಂದು ಪ್ರಾರಂಭವಾದ ಎಂಟನೇ ಅಧಿವೇಶನವು 18 ದಿನಗಳು ನಡೆದು ಒಟ್ಟು 105.15 ಗಂಟೆಗಳ ಕಾಲ ಕಾರ್ಯಕಲಾಪಗಳನ್ನು ನಡೆಸಿರುತ್ತದೆ.

ಅಧಿವೇಶನದ ಪ್ರಾರಂಭದಂದು ಸನ್ಮಾನ್ಯ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಭಾಷಣ

ಮಾಡಿದರು.

ಇತ್ತೀಚೆಗೆ ನಿಧನರಾದ 10 ಗಣ್ಯರುಗಳ ಗೌರವಾರ್ಥ ಸಂತಾಪ ಸೂಚನಾ ನಿರ್ಣಯವನ್ನು ಅಂಗೀಕರಿಸಲಾಯಿತು.

ದಿನಾಂಕ 3ನೇ ಏಪ್ರಿಲ್ 1999ರಂದು ರಾಜ್ಯಪಾಲರ ಭಾಷಣದ ಮೇಲಿನ ಪ್ರಸ್ತಾವಕ್ಕೆ ಮಾನ್ಯ ಮುಖ್ಯ ಮಂತ್ರಿಯವರು ಉತ್ತರ ನೀಡಿದ ನಂತರ ವಂದನಾ ನಿರ್ಣಯವನ್ನು ಅಂಗೀಕರಿಸಲಾಯಿತು.

ಈ ಅವಧಿಯಲ್ಲಿ ಒಟ್ಟು 1497 ಪ್ರಶ್ನೆಗಳನ್ನು ಸ್ವೀಕರಿಸಿದ್ದು, 222 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಮತ್ತು 1046 ಪ್ರಶ್ನೆಗಳನ್ನು ಚುಕ್ಕೆ ರಹಿತ ಪ್ರಶ್ನೆಗಳನ್ನಾಗಿ ಅಂಗೀಕರಿಸಲಾಗಿರುತ್ತದೆ. 205 ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಹಾಗೂ 812 ಚುಕ್ಕೆ ರಹಿತ ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಗಿದೆ.

ಒಟ್ಟು 65 ಗಮನ ಸೆಳೆಯುವ ಸೂಚನೆಗಳನ್ನು ಸ್ವೀಕರಿಸಿದ್ದು ಅವುಗಳಲ್ಲಿ 5 ಸೂಚನೆಗಳು ಚರ್ಚೆಯಾಗಿರುತ್ತದೆ. 02 ಅಲ್ಪಕಾಲಾವಧಿ ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಅವುಗಳ ಪೈಕಿ ಯಾವುದೇ ಸೂಚನೆಯನ್ನು ಸದನದಲ್ಲಿ ಚರ್ಚೆಗೆ ತೆಗೆದುಕೊಂಡಿರುವುದಿಲ್ಲ. ಅರ್ಧ ಗಂಟೆ ಕಾಲಾವಧಿ ಚರ್ಚೆಯ ಒಂದು ಸೂಚನೆ ಸ್ವೀಕರಿಸಿದ್ದು, ಅದಕ್ಕೆ ಸದನದಲ್ಲಿ ಉತ್ತರಿಸಲಾಯಿತು.

ಅಧಿವೇಶನದಲ್ಲಿ ಒಟ್ಟು 13 ಅರ್ಜಿಗಳನ್ನು ಒಪ್ಪಿಸಲಾಯಿತು.

ಈ ಅಧಿವೇಶನದಲ್ಲಿ ಒಟ್ಟು 192 ಕಾಗದ ಪತ್ರಗಳನ್ನು ಮಂಡಿಸಲಾಯಿತು.

ವಿಧಾನ ಸಭೆಯ ವಿವಿಧ ಸ್ಥಾಯಿ ಸಮಿತಿಗಳಿಗೆ ಸದಸ್ಯರುಗಳನ್ನು ಚುನಾಯಿಸಬೇಕೆಂದು ಪ್ರಸ್ತಾವನೆಯನ್ನು ದಿನಾಂಕ 16ನೇ ಮಾರ್ಚ್ 1999ರಂದು ಮಂಡಿಸಲಾಯಿತು. ಅದೇ ರೀತಿ ಬೆಂಗಳೂರು ವಿಶ್ವವಿದ್ಯಾಲಯದ ಸೆನೆಟ್‌ಗೆ 5 ಜನ ಸದಸ್ಯರು, ಕರ್ನಾಟಕ ವಿಶ್ವವಿದ್ಯಾಲಯ ಸೆನೆಟ್‌ಗೆ 5 ಸದಸ್ಯರು ಹಾಗೂ ಕುವೆಂಪು ವಿಶ್ವವಿದ್ಯಾಲಯದ ಸೆನೆಟ್‌ಗೆ 5 ಜನ ಸದಸ್ಯರನ್ನು ಚುನಾಯಿಸುವ ಬಗ್ಗೆ ಪ್ರಸ್ತಾವನೆಯನ್ನು ಸಹ ಸದನದಲ್ಲಿ ಅದೇ ದಿನ ಮಂಡಿಸಲಾಯಿತು.

ನಿಯಮ 60ರ ಮೇರೆಗೆ 14 ನಿಲುವಳಿ ಸೂಚನೆಗಳನ್ನು, ನಿಯಮ 69ರ ಮೇರೆಗೆ 13 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳಲ್ಲಿ 12 ಸೂಚನೆಗಳಿಗೆ ನಿಯಮ 69ರ ಅಡಿ ಚರ್ಚೆಗೆ ಅವಕಾಶ ಕಲ್ಪಿಸಿ ಉತ್ತರಿಸಲಾಯಿತು.

ವಿಧಾನ ಮಂಡಲದ ವಿವಿಧ ಸಮಿತಿಗಳ 7 ವರದಿಗಳು, ಜಂಟಿ ಸದನ ಸಮಿತಿಗಳ ಮೂರು ವರದಿಗಳು ಹಾಗೂ ಭಾರತದ ನಿಯಂತ್ರಕರು - ಮಹಾಲೇಖಪಾಲಕರವರ ಒಂದು ವರದಿಯನ್ನು ಸದನಕ್ಕೆ ಒಪ್ಪಿಸಲಾಯಿತು.

ರಾಜ್ಯದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ಹಾಗೂ ವರದಕ್ಷಿಣೆ ಸಾವಿನ ಬಗ್ಗೆ ಸದನದಲ್ಲಿ ಪ್ರಸ್ತಾವವಾಗಿ, ಅಂತಹ ಪ್ರಕರಣಗಳನ್ನು ಕಡಿಮೆ ಮಾಡಲು ಸಂಬಂಧಪಟ್ಟ ಕಾನೂನುಗಳಿಗೆ ಸೂಕ್ತ ತಿದ್ದುಪಡಿ ಹಾಗೂ ಅವುಗಳ ಯಶಸ್ವಿ ಅನುಷ್ಠಾನಕ್ಕೆ ಸಲಹೆ ಸೂಚನೆಗಳನ್ನು ನೀಡಲು ಜಂಟಿ

ಸದನ ಸಮಿತಿಯನ್ನು ರಚಿಸಿ, ವಿಧಾನ ಸಭೆಯಿಂದ 15 ಸದಸ್ಯರನ್ನು ಸದರಿ ಸಮಿತಿಗೆ ನೇಮಕ ಮಾಡಲಾಯಿತು ಹಾಗೂ ವಿಧಾನ ಪರಿಷತ್ತಿನಿಂದ 5 ಸದಸ್ಯರನ್ನು ನೇಮಿಸಲು ಕೋರಲಾಯಿತು.

ದಿನಾಂಕ 17ನೇ ಮಾರ್ಚ್ 1999ರಂದು ಉಪ ಮುಖ್ಯಮಂತ್ರಿಯವರು 1999-2000ನೇ ಸಾಲಿನ ಆಯವ್ಯಯವನ್ನು ಸದನದಲ್ಲಿ ಮಂಡಿಸಿದರು. ದಿನಾಂಕ 27ನೇ ಮಾರ್ಚ್ 1999ರಂದು ಉಪ ಮುಖ್ಯಮಂತ್ರಿಯವರು 1998-99ನೇ ಸಾಲಿನ ಪೂರಕ ಅಂದಾಜುಗಳನ್ನು (ಅಂತಿಮ ಕಂತು) ಮಂಡಿಸಿದರು. ಆಯವ್ಯಯದ ಮೇಲಿನ ಚರ್ಚೆಗೆ ಹಾಗೂ ಪೂರಕ ಅಂದಾಜುಗಳ ಮೇಲಿನ ಚರ್ಚೆಗೆ ದಿನಾಂಕ 30ನೇ ಮಾರ್ಚ್ 1999ರಂದು ಉಪ ಮುಖ್ಯಮಂತ್ರಿಯವರು ಉತ್ತರ ನೀಡಿದರು ಹಾಗೂ ಪೂರಕ ಅಂದಾಜುಗಳ ಮತ್ತು ಬೇಡಿಕೆಗಳ (ಲೇಖಾನುದಾನ) ಪ್ರಸ್ತಾವನ್ನು ಸಭೆಯ ಮತಕ್ಕೆ ಹಾಕಿ ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ಅಧಿನಿಯಮ 1994ರ ಅಡಿಯಲ್ಲಿ ಒಂದು ಶಾಸನಾತ್ಮಕ ನಿರ್ಣಯವನ್ನು ದಿನಾಂಕ 3.4.1999ರಂದು ಸದನದಲ್ಲಿ ಮಂಡಿಸಿ ಅಂಗೀಕರಿಸಲಾಯಿತು.

ಈ ಅವಧಿಯಲ್ಲಿ ಒಟ್ಟು 18 ವಿಧೇಯಕಗಳನ್ನು ಪರ್ಯಾಲೋಚಿಸಿ ಅಂಗೀಕರಿಸಲಾಯಿತು. ಚುಕ್ಕೆ ಗುರ್ತಿನ 17 ಪ್ರಶ್ನೆಗಳಿಗೆ ಮತ್ತು 234 ಚುಕ್ಕೆ ರಹಿತ ಪ್ರಶ್ನೆಗಳಿಗೆ ಉತ್ತರ ಬರಬೇಕಾಗಿದೆ. ಇವುಗಳಿಗೆಲ್ಲಾ ಉತ್ತರ ದೊರಕಿಸಿಕೊಂಡು ಕಳುಹಿಸಿಕೊಡುತ್ತೇನೆ.

ಮಾನ್ಯ ಮಂತ್ರಿಗಳೇ, ಗೌರವಾನ್ವಿತ ವಿರೋಧಪಕ್ಷದ ನಾಯಕರೆ, ವಿವಿಧ ವಿರೋಧಪಕ್ಷಗಳ ಮುಖಂಡರುಗಳೆ, ಹಾಗೂ ಆತ್ಮೀಯ ಸ್ನೇಹಿತರುಗಳೆ, ಈ ದಿವಸ ಸರ್ಕಾರದ ಪರವಾಗಿ ಕೆಲವು ಮಾತುಗಳನ್ನು ಆಡಿದ ಆತ್ಮೀಯ ಸ್ನೇಹಿತರಾದಂತಹ ಶ್ರೀ ಪಿ.ಜಿ.ಆರ್. ಸಿಂಧ್ಯರವರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಕೆಲವು ಒಳ್ಳೆಯ ಮಾತುಗಳನ್ನು ಹೇಳಿದ್ದಾರೆ. ನಾನು ಅವರಿಗೆ ಅಭಾರಿಯಾಗಿದ್ದೇನೆ. ಅದೇ ರೀತಿ ಮಾನ್ಯ ಖರ್ಗೆಯವರು ಕೂಡ ಕೆಲವು ಒಳ್ಳೆಯ ಮಾತುಗಳನ್ನು ಹೇಳಿದ್ದಾರೆ ಮತ್ತು ಮಾನ್ಯ ವಾಟಾಳ್‌ನಾಗರಾಜ್‌ರವರು ಸದಾಕಾಲ ಹೇಳುತ್ತಿರುತ್ತಾರೆ. ನಾನು ತಮ್ಮ ಅಭಿನಂದನೆಗೆ ಅರ್ಹ ಹೌದೋ, ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ನಾನು ತೀರಾ ಚಿಕ್ಕ ವಯಸ್ಸಿನಲ್ಲಿ ಬದುಕಿಗೆ ಕಾಲಿಟ್ಟಾಗ, ಆದರ್ಶಗಳು ಮುಂದೆ ನಾನು ಅದರ ಹಿಂದೆ ಬರುತ್ತಿದ್ದೆ. ಆದರೆ, ಬರಬರುತ್ತಾ ಆದರ್ಶಗಳು ಒಂದು ಕಡೆ ನಾನ್ನೊಂದು ಕಡೆಗೆ ಅದೆ. ನನ್ನ ಪ್ರಯಾಣದ ದಿಕ್ಕು ಬದಲಾವಣೆಯಾಗಿದೆ. ನಮ್ಮಲ್ಲಿ ವ್ಯವಸಾಯ ಮಾಡುವ ಪದ್ಧತಿ ಮಾನ್ಯ ಬೈರೇಗೌಡರಿಗೆ ಗೊತ್ತು. ಸಕಾಲಿಕ ಮಳೆ ಆಗದೇ ಹೋದಾಗ, ಆ ಹೊಲವನ್ನು ನಾವು ಏನು ಮಾಡುತ್ತೇವೆಂದರೆ, ಹಾಗೆಯೆ ಬೀಳುಬಿಡುವುದಕ್ಕೆ ಮನಸ್ಸು ಆಗದೇ ಕಡೆಯಲ್ಲಿ ಒಂದು ಚೂರು ಮಳೆ ಆದಾಗ ಹುರಳಿ ಚೆಲ್ಲುತ್ತೇವೆ. ಹುರಳಿ ಚೆಲ್ಲಿದಾಗ ಅದಕ್ಕೆ ಗೊಬ್ಬರದ ಸಾಲು ತೆಗೆಯುವುದು, ಅಥವಾ ಮತ್ತೊಂದು ಮುತ್ವರ್ಜಿ ವಹಿಸುವುದಿಲ್ಲ. ಸುಮ್ಮನೆ ಅಲ್ಲಿ ಏನೊಂದು ವ್ಯವಸಾಯ ಮಾಡಬೇಕಷ್ಟೆ. ಇದಕ್ಕೆ ಸಾಮಾನ್ಯವಾಗಿ ಗಾದೆ ಮಾತಿನಲ್ಲಿ ನಮ್ಮ ಕಡೆ ಈ ರೀತಿ ಹೇಳುತ್ತಾರೆ, "ಹುರಳಿ ಹೊಲಕ್ಕೆ ಗೊಬ್ಬರದ ಸಾಲು ತೆಗೆಯುವುದಿಲ್ಲ" ಎಂದು. ಆದ್ದರಿಂದ ನಾನು ಹುರಳಿ ಹೊಲ ಎಂದು ನನಗೆ ಗೊತ್ತಿದೆ. ನಾನು

ಹೆಚ್ಚಿನದೇನು ನಿರೀಕ್ಷೆ ಮಾಡುವುದಿಲ್ಲ. ನಾನು ಕೆಲವು ಸಲ ದುಡುಕಿರಬಹುದು, ಕೆಲವು ಸಲ ಆವೇಶಪಟ್ಟಿರಬಹುದು. ನನ್ನದು ಕೂಡ ರಕ್ತ ಮಾಂಸದಿಂದ ಮಾಡಿದಂತಹ ಶರೀರ. ದಿವಸಕ್ಕೆ 10 ಸಲ ಸಿಟ್ಟು ಮಾಡಿಕೊಳ್ಳುತ್ತಿದ್ದವನು, ಕಳೆದ ನಾಲ್ಕೂವರೆ ವರ್ಷದಲ್ಲಿ ದಿವಸಕ್ಕೆ ನಾಲ್ಕೈದು ಸಲ ಸಿಟ್ಟು ಮಾಡಿಕೊಳ್ಳುತ್ತಿದ್ದೇನೆ. ಒಟ್ಟಾರೆ ಅನುಭವದ ಪರಿಣಾಮ ಹೇಳಬೇಕಾದರೆ, ನಾನು ಎಲ್ಲೋ ಏನನ್ನೋ ಕಳೆದುಕೊಂಡಿದ್ದೇನೆ. ಅದು ನನಗೆ ಗೊತ್ತಾಗುತ್ತಿಲ್ಲ. ನಾನು ಎಷ್ಟು ಆಲೋಚನೆ ಮಾಡಿ ಹುಡುಕುತ್ತಿದ್ದರೂ ನಾನು ಏನು ಕಳೆದುಕೊಂಡಿದ್ದೇನೆ ಎಂಬುದು ಮಾತ್ರ ಸಿಗುತ್ತಿಲ್ಲ. ಬಹುಶಃ ಬಹಳ ಪವಿತ್ರವಾದದನ್ನೇ ಕಳೆದುಕೊಂಡಿದ್ದೇನೆ ಎಂದು ನನ್ನ ಭಾವನೆಯಾಗಿದೆ. ಮಾನ್ಯ ವಾಟಾಳ್‌ನಾಗರಾಜ್‌ರವರು ಹೇಳಿರುವಂತೆ ಚುನಾವಣೆ ಎಲ್ಲಾ ಇನ್ನೊಂದು ಅರ್ಥವಾ ಮತ್ತೊಂದು. ನಾನು ಬಹಳ ದೂರ ಹೊರಟಿದ್ದೇನೆ. ಅಷ್ಟೆಲ್ಲಾ ಆಸೆಗಳು, ಆಕಾಂಕ್ಷೆಗಳು ನಾನೇನು ಇಟ್ಟುಕೊಂಡಿಲ್ಲ. ನನ್ನಂಥ ಒಬ್ಬ ಅಲ್ಪನನ್ನು ನನ್ನ ಜನ ಮೂರು ಸಲ ಈ ಸಭೆಗೆ ಕಳುಹಿಸಿದ್ದಾರೆ. ಅವರ ಋಣ ತೀರಿಸಿಕೊಳ್ಳುವ ಪ್ರಯತ್ನವನ್ನು ನನ್ನ ಯೋಗ್ಯತೆಯ ಅನುಸಾರವಾಗಿ ಎಷ್ಟು ಬೇಕೋ ಅಷ್ಟನ್ನು ಮಾಡಿದ್ದೇನೆ. ಈ ಸ್ಥಾನದಲ್ಲಿ ಕುಳಿತು ಕೆಲಸ ಮಾಡುವ ವೇಳೆಗೆ ಒಂದು ಕ್ಷಣ ಕೂಡ ನಾನು ಯಾರ ವಿಚಾರದಲ್ಲಿಯೂ ಪೂರ್ವಾಗ್ರಹಪೀಡಿತವಾಗಿ ಕೆಲಸ ಮಾಡಿಲ್ಲ. ಒಂದು ವೇಳೆ ನಾನು ಹಾಗೆ ಕೆಲಸ ಮಾಡುವ ಸಂದರ್ಭದಲ್ಲಿ ಅಲ್ಲೋ ಇಲ್ಲೋ ಬೇಸರವಾಗಿದ್ದರೆ ಅವರಿಗೆ ಕ್ಷಮೆಯನ್ನು ನಾನು ಕೋರುತ್ತೇನೆ. ನನ್ನ ಕರ್ತವ್ಯ ನಿರ್ವಹಣೆಯನ್ನು ನನ್ನ ಮನಸ್ಸಿಗೆ ತೃಪ್ತಿ ಬರುವ ಹಾಗೆ ಕೂಡ ಮಾಡುವುದಕ್ಕಾಗಲಿಲ್ಲ. ಕೆಲವು ಸಲ ಆತ್ಮ ಸಾಕ್ಷಿಯನ್ನು ಸಾಯಿಸಿಕೊಂಡು ಕೆಲಸ ಮಾಡಬೇಕಾಗುತ್ತದೆ. ನಮ್ಮ ವ್ಯವಸ್ಥೆ ನಮ್ಮ ಸಮಾಜ ಇದೇ ರೀತಿ ಇದೆ ಎನ್ನತಕ್ಕಂಥ ಅರಿವು ನನಗೆ ಇದೆ. ಕೆಲವು ಹೊಸ ಸದಸ್ಯರಿಗೂ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಆದರೆ ಕೆಲವರಿಗೆ ಕೊಡುವುದಕ್ಕೆ ಆಗಲಿಲ್ಲ ಮತ್ತು ಕೆಲವು ವಿಚಾರಗಳನ್ನು ಚರ್ಚೆ ಮಾಡುವುದಕ್ಕಾಗಲಿಲ್ಲ. ಈ ಎಲ್ಲಾ ನೋವು ನನಗೂ ಇದೆ. ಎಲ್ಲೋ ಒಂದು ಕಡೆ ನನ್ನ ಕೆಲಸಗಳನ್ನು ಸರಿಯಾಗಿ ನಿರ್ವಹಣೆ ಮಾಡಿದ್ದೇನೆ ಎನ್ನತಕ್ಕಂಥ ಸಮಾಧಾನ ಕೂಡ ಬರುತ್ತದೆ. ನಾನು ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ, ಎಲ್ಲರೂ ನನ್ನ ಜೊತೆ ಸಹಕರಿಸಿದ್ದೀರಿ ಮತ್ತು ಮಂತ್ರಿಗಳು ಮತ್ತು ಅನೇಕ ಜನ ಸ್ನೇಹಿತರುಗಳು ನನ್ನ ಕ್ಷೇತ್ರದ ಕೆಲಸ ಬಂದಾಗ ತಮ್ಮ ಎಲ್ಲಾ ಧಾರಾಳತನವನ್ನು ತೋರಿಸಿ ನನಗೆ ಸಹಾಯ ಮಾಡಿದ್ದಾರೆ. ನಾನು ಯಾವುದನ್ನು ಮರೆಯುವವಹಾಗಿಲ್ಲ. ಮಾನ್ಯ ಸಿಂಧ್ಯಾರವರು ಮತ್ತು ಮಾನ್ಯ ಪ್ರಕಾಶ್, ಮಾನ್ಯ ಬೈರೇಗೌಡರು, ಮಾನ್ಯ ಬಚ್ಚೇಗೌಡರು ಮತ್ತು ಇನ್ನು ಅನೇಕ ಜನರು, ನಾನು ಹೆಸರುಗಳನ್ನು ಹೇಳುತ್ತಾ ಹೋಗುವುದಿಲ್ಲ, ಎಲ್ಲಾ ಸ್ನೇಹಿತರು ಅತ್ಯಂತ ಗೌರವದಿಂದ, ಪ್ರೀತಿಯಿಂದ ನನ್ನನ್ನು ಕಂಡಿದ್ದಾರೆ. ಎಷ್ಟು ಕೆಲಸ ಮಾಡಿದರು ನಮಗೂ ತೃಪ್ತಿ ಇರುವುದಿಲ್ಲ. ಅವರು ಕೂಡ ಅಧ್ಯಕ್ಷರು ಎನ್ನುವಂತಹ ಕಾರಣದಿಂದ ಸಹಾಯ ಮಾಡಿದ್ದಾರೆ. ಅದೇ ರೀತಿ ಮೊದಲು ವಿರೋಧಪಕ್ಷದ ನಾಯಕರಾಗಿದ್ದ ಮಾನ್ಯ ಯಡಿಯೂರಪ್ಪನವರು ನಂತರ ಅಧಿಕೃತವಾಗಿ ನಾಯಕರಾದಂಥ ಮಾನ್ಯ ಖರ್ಗೆಯವರು ಮತ್ತು ಅವರ ಪಕ್ಷದ ಇತರ ಮುಖಂಡರು, ವಾಟಾಳ್‌ನಾಗರಾಜ್‌ರವರು, ಶ್ರೀರಾಮರೆಡ್ಡಿಯವರು ಮತ್ತು ಪುಟ್ಟಣ್ಣಯ್ಯನವರು, ಜುಲ್ಫಿಕರ್ ಹುಷ್ಮಿಯವರು ಮತ್ತು ಮುನಿಯಪ್ಪನವರು, ರಾಜೇಂದ್ರರವರು ಮತ್ತು ನಮ್ಮ ಉಪನಾಯಕರಾದಂಥ ಮಾನ್ಯ ಸುರೇಶ್ ಕುಮಾರ್‌ರವರು ಮತ್ತು ಇತ್ತೀಚೆಗೆ ಬಿ.ಜೆ.ಪಿ.ಯ ನಾಯಕರಾಗಿ ಆಯ್ಕೆಗೊಂಡ ಶ್ರೀಮಾನ್ ಈಶ್ವರಪ್ಪನವರು ಮತ್ತು ಈ ಕಡೆಗೆ ಅನೇಕ ಸ್ನೇಹಿತರು

ಅನೇಕ ಸಂದರ್ಭಗಳಲ್ಲಿ ನನ್ನ ಜೊತೆ ನಿಂತಿದ್ದಾರೆ. ನನ್ನ ವೈಯುಕ್ತಿಕ ಸಂಬಂಧವನ್ನು ಬೆಳೆಸಿಕೊಂಡು ನನ್ನ ಮೇಲಿನ ಪ್ರೀತಿ ವಿಶ್ವಾಸಕ್ಕೆ ಕೆಲವು ವಿಚಾರಗಳನ್ನು ಅವರು ಗಟ್ಟಿಯಾಗಿ ಪ್ರತಿಪಾದನೆ ಮಾಡಬೇಕೆಂದಿದ್ದರೂ ಕೂಡ ಸಡಿಲ ಬಿಟ್ಟಿರತಕ್ಕಂಥದ್ದು ನನಗೆ ಗೊತ್ತಿದೆ. ಒಂದು ಸಮಾಧಾನ ಏನೆಂದರೆ, ಇಡೀ ರಾಷ್ಟ್ರದಲ್ಲಿರತಕ್ಕಂಥ ಸಭೆ, ಸದನಗಳನ್ನು ಮತ್ತು ರಾಜಕೀಯ ವಾತಾವರಣ ನೋಡಿ, ನಮ್ಮ ಸದನಗಳ ಕಡೆ ನೋಡಿಕೊಂಡಾಗ ಬಹಳ ಉತ್ತಮವಾದಂತಹ ಸಭೆ ಅಲ್ಲದಿದ್ದರೂ ಕನಿಷ್ಟ ಪಕ್ಷ ಜನ ಬೇಸರಪಟ್ಟುಕೊಳ್ಳತಕ್ಕಂಥ ಸಭೆಯಾಗಿ ನಮ್ಮ ಸಭೆ ಪರಿವರ್ತನೆ ಆಗಿಲ್ಲ. ಎಲ್ಲರೂ ನಾಗರೀಕತೆಯಿಂದ ನಡೆದುಕೊಂಡಿದ್ದೇವೆ ಎನ್ನತಕ್ಕಂಥ ತೃಪ್ತಿ ನನಗೆ ಇದೆ. ಅದಕ್ಕೆಲ್ಲಾ ತಮ್ಮ ಸಹಕಾರ ಮತ್ತು ವಿಶೇಷವಾಗಿ ಪತ್ರಿಕೆಯವರು ಬಹಳ ದೊಡ್ಡ ರೀತಿಯಲ್ಲಿ ನನ್ನ ಜೊತೆ ಸಹಕಾರ ಕೊಟ್ಟಿದ್ದಾರೆ ಮತ್ತು ಬಹಳ ಪ್ರೀತಿಯನ್ನು ತೋರಿಸಿದ್ದಾರೆ. ಅವರು ತೋರಿಸಿದ ಔದಾರೀಕರಣಕ್ಕೆ ನಾನು ಋಣಿಯಾಗಿದ್ದೇನೆ. ಸದನಗಳ ಕಲಾಪವನ್ನು ಪ್ರಕಟಪಡಿಸುವಾಗಲೂ ಕೂಡ ಬಹಳ ಜಾಗ್ರತೆಯಿಂದ ಪ್ರಕಟಣೆ ಮಾಡಿದ್ದಾರೆ. ಹಾಗೆಯೇ, ಆಕಾಶವಾಣಿ, ಟಿ.ವಿ. ಮತ್ತು ಸಿಟಿ ಕೇಬಲ್‌ನವರು ಮತ್ತು ಇತರ ಎಲ್ಲಾ ಮಾಧ್ಯಮಗಳವರೆಲ್ಲರೂ ಕೂಡ ಸಹಾಯ ಮಾಡಿದ್ದಾರೆ. ಇದೇ ರೀತಿ ಅಧಿಕಾರಿ ಬಂಧುಗಳು ಕೂಡ ಸಹಾಯ ಮಾಡಿದ್ದಾರೆ. ಇವರು ಸದನಕ್ಕೆ ಬಂದು ತಮ್ಮನ್ನು ತಾನು ರಕ್ಷಣೆ ಮಾಡಿಕೊಳ್ಳತಕ್ಕಂಥ ಸ್ಥಿತಿಯಲ್ಲಿ ಅವರು ಇರುವುದಿಲ್ಲ. ಕೆಲವೊಮ್ಮೆ ನಾವು ಅವರ ಬಗ್ಗೆ ನಿಷ್ಕೂರವಾಗಿ ಮಾತನಾಡುತ್ತೇವೆ. ಇವರಲ್ಲಿ ಕೆಲವರು ಉತ್ತಮರು ಮತ್ತು ತಪ್ಪುಮಾಡಿದಂಥವರು ಸಹ ಇರುತ್ತಾರೆ. ಆದರೂ ಕೂಡ ಸದನ ಕಲಾಪಗಳನ್ನು ನಡೆಸುವ ವಿಚಾರದಲ್ಲಿ ಬಹಳ ಗೌರವದಿಂದ ನಡೆದುಕೊಂಡಿದ್ದಾರೆ. ಸಭಾನಾಯಕರಾಗಿ ಮೊದಲು ಮಾನ್ಯ ದೇವೇಗೌಡರು ಇದ್ದರು, ಅವರದು ಒಂದು ರೀತಿಯ ಸ್ವಭಾವ, ಅವರನ್ನು ನಗುಮುಖದಲ್ಲಿ ನೋಡುವುದೇ ಕಷ್ಟವಾಗುತಿತ್ತು. ಆದರೂ ಅವರ ಜೊತೆಗೆ ಹೊಂದಿಕೊಂಡು ಕೆಲಸ ಮಾಡಬೇಕಾಗಿತ್ತು ಮತ್ತು ಮಾನ್ಯ ಪಟೇಲ್‌ರವರದು ಮತ್ತೊಂದು ರೀತಿಯ ಸ್ವಭಾವ. ಈ ಇಬ್ಬರು ನಾಯಕರ ಹತ್ತಿರ ಎಂದೂ ನನ್ನ ಗೌರವಕ್ಕೆ ಕೊರತೆಯಾಗಿರಲಿಲ್ಲ ಮತ್ತು ಸಾರ್ವಜನಿಕ ಕೆಲಸ ಮಾಡುವುದಕ್ಕೆ ನನಗೆ ಏನೂ ತೊಂದರೆ ಆಗಿರಲಿಲ್ಲ. ಅವರ ಸಹಕಾರ ಮತ್ತು ಪೂರ್ಣ ಪ್ರೀತಿಯನ್ನು ನಾನು ಅನುಭವಿಸಿದ್ದೇನೆ. ಎಲ್ಲಾ ರಾಜಕೀಯ ಪಕ್ಷಗಳವರು, ಪಕ್ಷೇತರರು ನನ್ನನ್ನು ಬಹಳ ಗೌರವದಿಂದ ನಡೆಸಿಕೊಂಡಿದ್ದೀರಿ, ನೀವು ಹೇಳಿರತಕ್ಕಂಥ ಮಾತುಗಳಿಗೆ ನಾನು ತಲೆಬಾಗಿದ್ದೇನೆ. ಅದಕ್ಕೆ ಪ್ರತ್ಯುತ್ತರವಾಗಿ ನಿಮ್ಮ ವಿಶ್ವಾಸಕ್ಕೆ ಅರ್ಹನಾಗಿ ಬದುಕತಕ್ಕಂಥ ಪ್ರಯತ್ನವೊಂದನ್ನು ಮಾಡುತ್ತೇನೆ. ನಾನು ಸಾರ್ವಜನಿಕ ಬದುಕಿನಲ್ಲಿ ಉಳಿಯಬಹುದು ಅಥವಾ ಹೊರಹೋಗಬಹುದು. ಆದರೆ, ಇನ್ನು ಅನಿಶ್ಚಿತ ಸ್ಥಿತಿಯಲ್ಲಿ ನಾನಿದ್ದೇನೆ. ನಿಮ್ಮೆಲ್ಲರ ಸಹಕಾರಕ್ಕೆ ವಂದಿಸಿ ಈ ಸಭೆಯ ಕಲಾಪವನ್ನು ಇವತ್ತು ಇಲ್ಲಿಗೆ ಮುಕ್ತಾಯಗೊಳಿಸೋಣ. ಸಭೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುತ್ತಿದ್ದೇನೆ ಎನ್ನತಕ್ಕಂಥ ಮಾತನ್ನು ಹೇಳುತ್ತಾ ಎಲ್ಲರಿಗೂ ಧನ್ಯವಾದಗಳು.

(ಸದನವು ಸಂಜೆ 9 ಗಂಟೆ 1 ನಿಮಿಷಕ್ಕೆ ಮುಕ್ತಾಯಗೊಂಡು, ಅನಿರ್ದಿಷ್ಟ ಕಾಲದವರೆಗೆ ಸಭೆಯನ್ನು ಮುಂದೂಡಲಾಯಿತು)

(+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)